ಯವರು ಒಂದು ದಿವಸವೂ ದೇವಸ್ಥಾನಗಳಲ್ಲಿ ಪೂಜೆ ಮಾಡಿದವರಲ್ಲ. ತಾವು ಸ್ವತಃ ಕುಳಿತುಕೊಂಡು ತಪಸ್ಸು ಮಾಡಿ, ಧ್ಯಾನ ಮಾಡಿ ಪರಮಾತ್ಮನನ್ನು ಒಲಿಸಿಕೊಳ್ಳುತ್ತಿದ್ದರು. ಆದರೆ ದೇವಸ್ಥಾನದ ಬಾಗಿಲಿಗೂ ಹೋಗಿರಲಿಲ್ಲ. ಹರಿಜನರನ್ನು ಗಾಂಧೀಜಿಯವರು ತಮ್ಮ ಜೀವಮಾನದಲ್ಲೇ ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿರಲಿಲ್ಲ. ತಾವು ಮಾತ್ರ ಏಕೆ ಹೀಗೆ ಮಾಡಿದ್ದೀರಿ ಎಂದು ನಾನು ಕೇಳಬೇಕಾಗಿದೆ.

ಶ್ರೀ ಸುದೀಂದ್ರರಾವ್ ಕಸಭೆ.— ಗಾಂಧೀಜಿಯವರು ಪ್ರತಿನಿತ್ಯ ರಾಮಮಂದಿರಕ್ಕೆ ಹೋಗುತ್ತಿದ್ದರು ಮತ್ತು ರಾಮಧ್ಯಾನ ಮಾಡುತ್ತಿದ್ದರು.

Imports of pulp by the Mysore Paper Mills

403 SRI G. BASAVANNAPPA (Holehonnur).—Will the Chief Minister be pleased to state.

(a) whether it is a fact that Mysore Paper Mills is going to import pulp for the manufacture of 75,000 tons of News Print per year in its expansion programmes ;

(b) if so, the cost of the pulp to be imported ;

(c) whether it is possible to reduce the quantity of pulp to be imported by Mysore Paper Mills by resorting to alternatives ?

SRI R. GUNDU RAO (Chief Minister).—

(a) Yes.

(b) As the cost of the imported pulp varies almost every quarter. the actual cost cannot be indicated. However, it will be generally higher than the cost of similar pulp made in the mill.

(c) Yes.

ಶ್ರೀ ಜಿ. ಬಸವಣ್ಣಪ್ಪ.—ಸ್ವಾಮಿ, ಭದ್ರಾವತಿಯ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ೭೫ ಸಾವಿರ ಟನ್ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡುವ ಯೋಜನೆ ಇದೆ. ಇದನ್ನು ಮಾಡಬೇಕಾದರೆ ಇದಕ್ಕೆ ಎಷ್ಟು ಪ್ರಮಾಣದ ಪಲ್ಪ್ ಬೇಕಾಗುತ್ತದೆ ಮತ್ತು ಅದರ ವೆಚ್ಚವೆಷ್ಟು ?

SRI M. VEERAPPAMOILY.—The total requirement of bamboo and wood would be 125,000 tonnes for the newsprint project and 120,000 tonnes for the old mill per annum i. e. for the writing and printing project.

ಶ್ರೀ ಜಿ. ಬಸವಣ್ಣಪ್ಪ.—ವಿದೇಶಗಳಿಂದ ಆಮದು ಮಾಡಿಕೊಳ್ಳುವ ಇಂಪೋರ್ಟೆಡ್ ಪಲ್ಪ್ ಮೇಲೆ ನಾವು ಅವಲಂಬಿಸಿದ್ದೇ ಆದರೆ, ಪೂರೈಕೆಯಲ್ಲಿ ಹೆಚ್ಚು ಕಡಿಮೆಯಾದ ಪಕ್ಷದಲ್ಲಿ ಈ ಮಿಲ್ಲ್‌ನ್ನು ಕ್ಲೋಸ್ ಮಾಡುವ ಪರಿಸ್ಥಿತಿ ಉದ್ಭವವಾಗುವುದಿಲ್ಲವೇ ? ಆಗ ಸರ್ಕಾರ ಏನು ಆಸ್ಥೆ ವಹಿಸುತ್ತದೆ ?

ಶ್ರೀ ಎಂ ವೀರಪ್ಪ ಮೊಯಿಲಿ.—ಈಗಾಗಲೇ ನಾವು ರಾ-ಮೆಟೀರಿಯಲ್ಸ್ ಒದಗಿಸಲಿಕ್ಕಾಗಿ ಮತ್ತು ಆಮದು ಮಾಡತಕ್ಕಂಥ ಅಂಶವನ್ನು ತತ್‌ಕ್ಷಣ ಕಡಿಮೆ ಮಾಡುವುದಕ್ಕೋಸ್ಕರವಾಗಿ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದರಲ್ಲಿ ಪ್ರಮುಖವಾಗಿ ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾಗಿದೆ. ಇದನ್ನು ಮಾಡಿದರೆ ಬಗಾಸ್ ಉತ್ಪಾದನೆಯಾಗುತ್ತದೆ, ಆದನ್ನು ಒಜ್ಜ್ ಪೇಪರ್ ಮಿಲ್‌ಗಳಿಗೆ ಉಪಯೋಗಿಸಿಕೊಳ್ಳಲು ಬರುತ್ತದೆ. ಆದರಿಂದಾಗಿ ಶೇಕಡಾ ೪೦ ರಷ್ಟು ಅವಶ್ಯಕತೆಯನ್ನು ಕಾಗದ ಕಾರ್ಖಾನೆ ವಿಷಯದಲ್ಲಿ ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ ಈ ಬಗೆ ನಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಉಳಿದ ರಾ-ಮೆಟೀರಿಯಲ್ಸ್‌ನ್ನು ಆಫಾರ್

ಸ್ಟೇಶನ್ ಮಾಡುವುದರ ಮೂಲಕ ಪಡೆಯಬಹುದು. ಆದ್ದರಿಂದ ಬೇರೆ ಬೇರೆ ರೀತಿಯಲ್ಲಿ ಆಫಾರ್ ಸ್ಟೇಶನ್ ಮಾಡುವುದಕ್ಕಾಗಿ ಈಗಾಗಲೇ ೧೫೦೦ ಎಕರೆ ಜಾಗದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಕೂಡಲೇ ಆಲ್ಲದಿದ್ದರೂ ಲಾಂಗ್ ರೇಂಜ್ ಪ್ಲಾನ್‌ನಲ್ಲಿ ರಾ ಮೆಟೀರಿಯಲ್ಸ್ ಕೊಡುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ನಮ್ಮಲ್ಲಿ ಪಲ್ಪ್ ಮಿಲ್ಲ್‌ನ್ನು ಕೂಡ ಈಗಾಗಲೇ ಪ್ರಾರಂಭಮಾಡಿದ್ದೇವೆ. ಓಲ್ಡ್ ಪೇಪರ್ ಮಿಲ್ ಈಗಾಗಲೇ ಕಮರ್ಷಿಯಲ್ ಪ್ರೊಡಕ್ಷನ್‌ಗೆ ಇಳಿದುಬಿಟ್ಟಿದೆ. ಇನ್ನು ನ್ಯೂಸ್ ಪ್ರಿಂಟ್ ಟ್ರಯಲ್ ಪ್ರೊಡಕ್ಷನ್ ಪ್ರಾರಂಭಮಾಡಲು ಕೂಡ ಸಾಧ್ಯವಾಗುತ್ತದೆ. ಆಗ ಖಂಡಿತ ಪರಿಸ್ಥಿತಿ ಸುಧಾರಿ ಸುತ್ತದೆ ಎಂದು ಹೇಳಬಹುದು.

ಶ್ರೀ ಜಿ. ಬಸವಣ್ಣಪ್ಪ —ರಾ–ಮೆಟೀರಿಯಲ್ಸ್ ಬಗ್ಗೆ ಸರ್ಕಾರದವರು ಫಾರೆಸ್ಟ್ ಲ್ಯಾಂಡನ್ನು ರಿಲೀಸ್ ಮಾಡಿ ಆಫಾರ್‌ಸ್ಟೇಶನ್ ಮಾಡುವುದಾಗಿ ಹೇಳಿದರಿ. ಆದರೆ ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಕೊಟ್ಟು ನಾಲ್ಕು ವರ್ಷಗಳಾಯಿತು. ಆದರೆ ಅದು ಕಾಗದದ ಮೇಲೆ ಮಾತ್ರ ಇದೆ. ಸರ್ಕಾರದ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ ಅಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇದುವರೆಗೂ ಮಂದಗತಿ ಇತ್ತು, ಆದರೆ ನಮ್ಮ ಸರ್ಕಾರ ಇದನ್ನು ಹತೋಟಿಗೆ ತೆಗೆದುಕೊಂಡ ಮೇಲೆ ನಾವು ರಾ-ಮೆಟೀರಿಯಲ್ಸ್ ಕೊಡುವ ಬಗ್ಗೆ ೫೦೦ ಎಕರೆಯಲ್ಲಿ ಆಫಾರ್‌ಸ್ಟೇಶನ್ ಮಾಡಲು ನಿರ್ಧರಿಸಿದ್ದು ಮತ್ತು ಈಗ ಇರತಕ್ಕಂಥ ನ್ಯೂನತೆಗಳನ್ನ ಹೋಗಲಾಡಿಸಿ ನ್ಯೂಸ್‌ಪ್ರಿಂಟ್ ಪ್ರಾಜೆಕ್ಟ್‌ಗೆ ತ್ವರಿತ ಗಮನ ಕೊಟ್ಟಿದ್ದರಿಂದ ಇದು ಈ ವರ್ಷದ ಕೊನೆಯೊಳಗೆ ಆಗುತ್ತದೆ ಎಂದು ಹೇಳಬಹುದು. ಡಿಸೆಂಬರ್ ಕೊನೆಯೊಳಗೆ ಕಮರ್ಷಿಯಲ್ ಪ್ರೊಡಕ್ಷನ್ ಕೂಡ ಸಂಪೂರ್ಣವಾಗಿ ಪ್ರಾರಂಭವಾಗುತ್ತದೆ.

Water Supply Scheme in the State

676 SRI BHAVU RAO DESHPANDE (Dharwar).—Will the Minister for Housing and Urban Development be pleased to state.

(a) the number of towns and cities where Water Supply Schemes were undertaken by the Government ;

(b) the names of such towns and cities.

(c) the quantum of amount sanctioned by the Government to the Water Supply Scheme of Mysore City ;

(d) the quantum of Amount sanctioned by the Government to the Water Supply Scheme of Hubli-Dharwad Corporation ?

SRI DHARAM SINGH (Minister for Housing and Urban Development).—

(a) There are 15 in total. Out of this, the Karnataka Urban Water Supply and Sewerage Board has undertaken the maintenance of water supply to 11 towns in the past and to 4 towns recently. Final decision is being taken to the Government about entrusting the maintenanee of Water Supply by the Board to the four towns cited indicating the terms, assets and responsibilties.